# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್- ಸಂಖ್ಯೆ-49, ರಾಜರಾಜೇಶ್ವರಿ ನಗರ (ಹಳೆ ವಾರ್ಡ್ ಸಂಖ್ಯೆ.160) ರಲ್ಲಿ ದಿನಾಂಕ: 07.01.2023 ರಂದು, ನಡೆದ ವಾರ್ಡ್ ಸಮಿತಿ**

**ಸಭೆಯ ಸಭಾ ನಡವಳಿಗಳು**

ಜನವರಿ-2023 ಮಾಹೆಯ ಮೊದಲನೇ ಶನಿವಾರದ **ವಾರ್ಡ್** ಸಮಿತಿ ಸಭೆಯನ್ನು ದಿನಾಂಕ: 07.01.2023 ರಂದು ನಡೆಸಲಾಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

1. ವಿಶ್ವನಾಥ್ ಪಾಟೀಲ್ ನಂ.80, 3ನೇ ಕ್ರಾಸ್, 1ನೇ ಮೈನ್ 5ನೇ ಹಂತ ಸ್ವರ್ಗರಾಣಿ ಶಾಲೆಯ ಹತ್ತಿರ ರಾಜರಾಜೇಶ್ವರಿನಗರದ ನಿವಾಸಿ ಇವರು RR Nagar Environment Group ನ ಸದಸ್ಯರು. ಇವರು ತಮ್ಮ ಪ್ರದೇಶದಲ್ಲಿ ರಾತ್ರೋ ರಾತ್ರಿ ಅನಧಿಕೃತವಾಗಿ ಗಿಡ/ಮರಗಳನ್ನು ಮರಗಳನ್ನು ಕಡಿಯುತ್ತಿದ್ದಾರೆ ದೂರು ನೀಡಿದರು.
2. ಜವಹಾರ್ ಲಾಲ್ ನೆಹರು ರಸ್ತೆಯಲ್ಲಿ ರಸ್ತೆ ಅಭಿವೃದ್ಧಿಯ ಹೆಸರಿನಲ್ಲಿ ಮರಗಳನ್ನು ಕಡಿಯುತ್ತಿದ್ದಾರೆ ಎಂದು ಆರೋಪಿಸಿದರು. ಹಾಗೂ ಪಾದಚಾರಿ ಮಾರ್ಗ ಅಭಿವೃಧ್ಧಿಯ ಸಮಯದಲ್ಲಿಯೇ ಗಿಡಗಳನ್ನು ನೆಡಲು ಜಾಗ ಕಲ್ಪಿಸಿ ಅಭಿವೃಧ್ಧಿಪಡಿಸುವಂತೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಅಭಿಯಂತರರಾದ ಶ್ರೀ.ಸಿದ್ದರಾಮಯ್ಯ ನವರು ಮುಖ್ಯ ರಸ್ತೆಗಳ ವಿಭಾಗದ ಅಭಿಯಂತರರಿಗೆ ಕರೆ ಮಾಡಿ ಸಾರ್ವಜನಿಕರ ಹಾಗೂ ಸ್ಥಳೀಯ ನಿವಾಸಿಗಳ ಕೋರಿಕೆಯಂತೆ ಗಿಡಗಳನ್ನು ನೆಡಲು ಸ್ಥಳಾವಕಾಶ ಕಲ್ಪಿಸಿ ರಸ್ತೆ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿಪಡಿಸಲು ಕೋರಿದರು.
3. ಶ್ರೀಮತಿ. ಮಾಲಿನಿ ಎಂಬುವವರು ಮೇಲ್ಕಂಡ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಿಸಿ ಪ್ರತೀ 15 ರಿಂದ 20 ಮೀಟರ್ ಗಳಿಗೆ ಗಿಡಗಳನ್ನು ನೆಡಲು 4 ರಿಂದ 5 ಅಡಿಗಳು ಜಾಗವನ್ನು ಬಿಟ್ಟು ಕಾಮಗಾರಿ ನಿರ್ವಹಿಸಲು ಕೋರಿದರು..
4. ಮರ/ಗಿಡಗಳನ್ನು ಕಡಿಯುತ್ತಿರುವ ಬಗ್ಗೆ ಅರಣ್ಯ ವಿಭಾಗದ ಅಧಿಕಾರಿಗಳಿಗೆ ತಿಳಿಸಿದ್ದರೂ ಕ್ರಮ ವಹಿಸಿರುವುದಿಲ್ಲವೆಂದು ಸಾರ್ವಜನಿಕರು ದೂರು ನೀಡಿದರು ಹಾಗೂ ಮೇಲಧಿಕಾರಿಗಳ ಗಮನಕ್ಕೆ ತರಲು ಯಾವ ಕಚೇರಿಗೆ ದೂರು ನೀಡಬೇಕೆಂದು ವಾರ್ಡ್ ಸಮಿತಿ ಸಭೆಯಲ್ಲಿ ಕೋರಲಾಗಿ ವಲಯ ಆಯುಕ್ತರಿಗೆ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು.

5. Wet Waste (ಹಸಿ ಕಸ ಸಂಗ್ರಹಣಾ)ದವರು ವಿಷಲ್ ಹಾಕಿಕೊಂಡು ಬರುತ್ತಿದಾರೆ. ಆದರೆ ಒಣ ಕಸ ಸಂಗ್ರಹಣೆಗೆ (Dry waste) ಮೈಕ್ ಹಾಕುತ್ತಿದ್ದಾರೆ ಇದರಿಂದ ಮನೆಯಲ್ಲಿರುವ ಹಿರಿಯರಿಗೆ ಹಾಗೂ ಮಕ್ಕಳಿಗೆ ತುಂಬಾ ತೊಂದರೆಯುಂಟಾಗುತ್ತಿದೆ ಆದ್ದರಿಂದ ಅವರಿಗೆ ಮೈಕ್ VOLUME ಕಡಿಮೆ ಮಾಡಲು ಕೋರಿದರು.

6. ಹಲಗೆವಡೆರಹಳ್ಳಿ ಮುಖ್ಯ ರಸ್ತೆಯಲ್ಲಿ White topping ಡಿವೈಡರ್ ನಲ್ಲಿ ಗಿಡಗಳನ್ನು ಬೆಳೆಸಿದ್ದಾರೆ ಆದರೆ ಆ ಗಿಡಗಳಿಗೆ ನೀರನ್ನು ಹಾಕುತ್ತಿಲ್ಲವೆಂದು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಗುತ್ತಿಗೆದಾರರಾದ ಪ್ರತಿನಿಧಿಯಾದ ಅಭಿಷೇಕ್ ಎನ್ನುವರಿಗೆ ಕರೆ ಮಾಡಿ ನೀರನ್ನು ಸಿಂಪಡಿಸಲು ಹೇಳಿದರು.

7. ಶ್ರೀ ಚಂದ್ರಶೇಖರ್ ರವರು ತಮ್ಮ ಪ್ರದೇಶದಲ್ಲಿ ಹಲವೆಡೆ ವಿದ್ಯುತ್ ಕಂಬ ಹಾಗೂ ಬೀದಿ ದೀಪಗಳು ಅಳವಡಿಸಿಲ್ಲ ಎಂದು ದೂರು ನೀಡಿದರು ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹರಿಸಲು ಕ್ರಮ ವಹಿಸಲಾಗುವುದೆಂದು ತಿಳಿಸದರು.

8. ಪದ್ಮಾವತಿ ಕಲ್ಯಾಣ ಮಂಟಪದ ಸುತ್ತಮುತ್ತಲ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಆ ಭಾಗದ ನಿವಾಸಿಯೋರ್ವರು ಕೋರಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-49

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49

**ಪ್ರತಿಯನ್ನು:-**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.